**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

ಸ್ಪೆಷಲ್ ಮೊಕದ್ದಮೆ ನಂಃ **94/2021**

| | | |
|---|---|---|
| ಸಾಕ್ಷಿದಾರರ ಹೆಸರು | - ಈರಯ್ಯ.ಕೆ.ಡಿ | ಪಿಡಬ್ಲ್ಯೂ- 03 |
| ತಂದೆಯ ಹೆಸರು | - ದ್ಯಾವಯ್ಯ | ಸಿಡಬ್ಲ್ಯೂ -09 |
| ವಯಸ್ಸು | - 50 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ಕೆರೆಮಕ್ಕಿ, ಚಿಕ್ಕಮಗಳೂರು | |

ದಿನಾಂಕಃ 21-07-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

1. ಆರೋಪಿ ಗೊತ್ತು. ಚಾಸಾ.1, ಚಾಸಾ.6 ರಿಂದ ಚಾಸಾ.8 ಗೊತ್ತು. ನಾನು ಚಾಸಾ.1 ರವರ ಜೊತೆ ಪೆಂಟಿಂಗ್ ಕೆಲಸ ಮಾಡುತ್ತೇನೆ.

2. ಸುಮಾರು 6 ವರ್ಷಗಳ ಹಿಂದೆ ರಾತ್ರಿ 8.30 ಹೊತ್ತಿಗೆ ನಾನು ಕೆಲಸ ಮುಗಿಸಿಕೊಂಡು ಚಾಸಾ.1 ರವರ ಮನೆಗೆ ಬಟವಾಡೆಗೆ ಹೋಗಿದ್ದೆ. ಚಾಸಾ.1 ಸಂತೆಗೆ ಹೋಗಿರುತ್ತಾರೆ ಎಂದು ಚಾಸಾ.6 ಹೇಳಿರುತ್ತಾರೆ. ನಾನು ಚಾಸಾ.1 ರವರನ್ನು ಕಾಯುತ್ತಾ ನಿಂತೆ. ನಂತರ ಚಾಸಾ.1 ಸಂತೆಯಿಂದ ಬಂದರು.

3. ಆ ಸಂದರ್ಭದಲ್ಲಿ ಚಾಸಾ.1 ಮತ್ತು ಆರೋಪಿತನ ನಡುವೆ ಚಾಸಾ.1 ಓಣಿಯಲ್ಲಿ ಬೈಕ್ ನಿಲ್ಲಿಸಿದ್ದಾನೆ ಎಂದು ಗಲಾಟೆಯಾಯಿತು. ಚಾಸಾ.1 ಬರುವುದಕ್ಕಿಂತಲೂ ಮೊದಲು ಆರೋಪಿ ಚಾಸಾ.6 ಮತ್ತು ಚಾಸಾ.7 ರವರ ಜೊತೆ ಜಗಳ ಮಾಡುತ್ತಿದ್ದ. ಚಾಸಾ.1 ಬರುತ್ತಿದ್ದಂತೆ ಆರೋಪಿ ಹೊಲಯ ಸೂಳೆಮಗನೇ, ಬೈಕ್ ನಿಲ್ಲಿಸಲಿಕ್ಕೆ ನಮ್ಮ ಜಾಗ ಬೇಕಾ ಎಂದು ಹೇಳಿ

ಕಪಾಳಕ್ಕೆ ಹೊಡೆದು ಕತ್ತಿಯಿಂದ ಕಡಿಯಲು ಬಂದನು. ಆರೋಪಿ ಕಡಿಯಲು ಬಂದಾಗ ಚಾಸಾ.1 ಬಾಗಿಲು ತೆಗೆದು ಮನೆಯೊಳಗೆ ಹೋದರು. ಆರೋಪಿ ಹೊಡೆಯಲು ಉಪಯೋಗಿಸಿದ ಕತ್ತಿ ಬಾಗಿಲಿಗೆ ಬಿತ್ತು.

4. ನಾನು ಮತ್ತು ಚಾಸಾ.8 ಜಗಳ ಬಿಡಿಸಿದೆವು. ಆಗ ಆರೋಪಿ ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಓಡಿ ಹೋದನು. ಈಗ ತೋರಿಸಿರುವ ಕತ್ತಿ ಅದೇ ಆಗಿರುತ್ತದೆ. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

5. ಆ ಸಂದರ್ಭದಲ್ಲಿ ಬೀದಿ ದೀಪ ಇತ್ತು. ಆ ಬೆಳಕಿನಲ್ಲಿ ಗಲಾಟೆ ನೋಡಿರುತ್ತೇನೆ. ಈ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲು: ಆರೋಪಿತನ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ-</u>

6. ನಾನು ಪೆಂಟಿಂಗ್ ಕೆಲಸ ಮಾಡುತ್ತೇನೆ. ಚಾಸಾ.1 ಸಹ ಪೆಂಟಿಂಗ್ ಕೆಲಸ ಮಾಡುತ್ತಾರೆ. ನಾವಿಬ್ಬರು ಒಂದೇ ಜಾತಿಗೆ ಸೇರಿದವರು ಮತ್ತು ಒಂದೇ ಕಡೆ ಕೆಲಸ ಮಾಡುತ್ತೇವೆ. ನಮ್ಮ ಮನೆಯಿಂದ ಚಾಸಾ.1 ರವರ ಮನೆ 7-8 ಕಿಮೀ ಆಗುತ್ತದೆ. ನಾನು ಮೆಸ್ತ್ರೀ ಕೈಕೆಳಗಡೆ ಕೆಲಸ ಮಾಡುತ್ತೇನೆ. ಚಾಸಾ.1 ರವರೇ ಕೆಲಸ ಮಾಡಿಸುತ್ತಾರೆ.

7. ಘಟನೆಯಾದ ದಿನ ಬುಧವಾರ. ಚಿಕ್ಕಮಗಳೂರಿನಲ್ಲಿ ಮಂಗಳವಾರ ಹಣ ಬಟವಾಡೆ ಮಾಡುತ್ತಾರೆ ಎಂದರೆ ಸರಿಯಲ್ಲ. ಬೆಳಿಗ್ಗೆ ಕೆಲಸ ಮಾಡಿ ಸಾಯಂಕಾಲ ಹಣ ಬಟವಾಡೆ ಮಾಡುತ್ತಾರೆ. ಚಿಕ್ಕಮಗಳೂರಿನಲ್ಲಿ ಬುಧವಾರದಂದು ಸಂತೆ ನಡೆಯುತ್ತದೆ. ಆ ದಿನ ತೋಟ ಮತ್ತು ಇತರೆ ಕೆಲಸಗಳಿಗೆ ಅಂಗಡಿ ಮಳಿಗೆಗಳನ್ನು ಬಿಟ್ಟು ರಜೆ

ಇರುತ್ತದೆ ಎಂದರೆ ಸರಿ.

8. ನನ್ನ ಬಳಿ ಬೈಕ್ ಇರುತ್ತದೆ. ಚಾಸಾ.1 ರವರ ಬಳಿ ಯಾವುದೇ ವಾಹನ ಇರುವುದಿಲ್ಲ. ನನ್ನ ಬಳಿ ಮೊಬೈಲ್ ಇರುತ್ತದೆ. ಚಾಸಾ.1 ರವರ ಬಳಿ ಸಹ ಮೊಬೈಲ್ ಇರುತ್ತದೆ. ಚಿಕ್ಕಮಗಳೂರು ನಗರದಿಂದ ಚಾಸಾ.1 ರವರ ಮನೆಗೆ 3 ಕಿಮೀ ದೂರ ಇರುತ್ತದೆ ಎಂದರೆ ಸರಿ. ಸಂಬಳ ನೀಡುವ ಕುರಿತು ನಾನು ಚಾಸಾ.1 ರವರನ್ನು ಫೋನ್ ಮಾಡಿ ಕೇಳಿರುವುದಿಲ್ಲ.

9. ಗಲಾಟೆಯಾಗಿತ್ತು ಎಂದು ಹೇಳುವ ಸಮಯದಲ್ಲಿ ಚಾಸಾ.1 ರವರ ಮನೆ ಇರುವ ಪ್ರದೇಶ ಅಷ್ಟು ಬೆಳೆದಿರಲಿಲ್ಲ ಮತ್ತು ಅಲ್ಲಲ್ಲಿ ಮನೆಗಳು ಮತ್ತು ಗುಡಿಸಲುಗಳು ಇದ್ದವು ಎಂದರೆ ಸರಿಯಲ್ಲ. ಅಲ್ಲಿ ಬೀದಿ ದೀಪ ಸಹ ಇರುವುದಿಲ್ಲ ಎಂದರೆ ಸರಿ. ಚಾಸಾ.1 ರವರ ಮನೆಯ ಬಳಿ ಬೀದಿ ದೀಪ ಇರುವುದಿಲ್ಲ ಮತ್ತು ಚಾಸಾ.1 ರವರ ಮನೆಯಿಂದ 100 ಮೀಟರ್ ದೂರದಲ್ಲಿ ಲೈಟ್ ಕಂಬ ಇರುತ್ತದೆ ಎಂದರೆ ನನಗೆ ದೂರ ಹೇಳಲು ಬರುವುದಿಲ್ಲ. ಆ ಸಮಯದಲ್ಲಿ ಕತ್ತಲೆ ಇತ್ತೋ ಎಂದರೆ ಬೆಳಕಿತ್ತು.

10. ಚಾಸಾ.1 ರವರ ಮನೆಯ ಬಳಿ ಹೊಸ ಮನೆ ಕಟ್ಟುತ್ತಿದ್ದರು. ಚಾಸಾ.1 ರವರ ಮನೆಯ ಬಳಿ ಬೈಕನ್ನು ನಿಲ್ಲಿಸಿದ್ದರು, ಆದರೆ ಯಾರದ್ದು ಮತ್ತು ಯಾವ ಮಾದರಿಯದು ಎಂದು ನನಗೆ ಹೇಳಲು ಬರುವುದಿಲ್ಲ. ನಿಪಿ.3 ರಲ್ಲಿ ಕಾಣುವ ರಸ್ತೆಯಂತೆ ಇರುವ ಜಾಗ 5 ಅಡಿ ಅಗಲ ಇರುತ್ತದೆ ಆದರೆ ರಸ್ತೆಯೋ ಅಥವಾ ಕಾಲು ದಾರಿಯೋ ಎಂದು ನನಗೆ ಹೇಳಲು ಬರುವುದಿಲ್ಲ. ನಿಪಿ.3 ರಲ್ಲಿ ಕಂಡುಬರುವ ಯಾವ ಜಾಗದಲ್ಲಿ ಬೈಕನ್ನು ನಿಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ.

11. ಚಾಸಾ.1 ರವರ ಮನೆ ಪೂರ್ತಿಯಾಗಿ ಕಟ್ಟಿ ಆಗಿರಲಿಲ್ಲ ಎಂದರೆ

ಸರಿ. ಸದರಿ ಮನೆಗೆ ಹಳೆಯ ಬಾಗಿಲನ್ನು ಕೂರಿಸಿದ್ದರು ಎಂದರೆ ಸರಿ. ನಾವು ಚಾಸಾ.1 ರವರ ಮನೆಯ ಪೋರ್ಟಿಕೋದಲ್ಲಿ ನಿಂತು ಮಾತನಾಡುತ್ತಿದ್ದೆವು. ಚಾಸಾ.1 ರವರ ಮನೆಗೆ ಪೋರ್ಟಿಕೋ ಇಲ್ಲ ಎಂದರೆ ಸರಿಯಲ್ಲ.

12. ಗಲಾಟೆ ಅರ್ಧ ಮುಕ್ಕಾಲು ಗಂಟೆ ನಡೆದಿರುತ್ತದೆ. ಚಾಸಾ.8 ನಮ್ಮ ಜೊತೆನೇ ಕೆಲಸ ಮಾಡುತ್ತಿದ್ದ. ನಾನು ಹಣ ಪಡೆದಿರುವುದಿಲ್ಲ ಮತ್ತು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಚಾಸಾ.1 ರವರಿಗೆ ಕಪಾಳಕ್ಕೆ ಹೊಡೆದಿದ್ದರು. ಅಲ್ಲಿ ಊದಿದ ಬಗ್ಗೆ ಅಥವಾ ಗುರುತು ಮುಡಿದ ಬಗ್ಗೆ ನಾನು ನೋಡಿರುವುದಿಲ್ಲ. ಚಾಸಾ.1 ರವರನ್ನು ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ. ಗುರುತು ಇದ್ದವರಿಗೆ ಏಟು ಆದಲ್ಲಿ ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆ.

13. ಚಾಸಾ.6 ಮತ್ತು 7 ರ ಜೊತೆ ಆರೋಪಿ ಜಗಳ ಮಾಡುತ್ತಿದ್ದಾಗ ನಾವು ಬಿಡಿಸಲು ಹೋಗಿರುವುದಿಲ್ಲ. ಕತ್ತಿ ಜಗಳವಾಡುತ್ತಿರುವಾಗ ಆರೋಪಿಯ ಕೈಯಲ್ಲಿ ಇತ್ತು. ಆ ಕತ್ತಿ ಕಸಿ ಕತ್ತಿ ಆಗಿತ್ತು. ಕಸಿ ಕತ್ತಿ ಎಂದರೆ ತುದಿಯಲ್ಲಿ ಚೂಪು ಇದ್ದು ಹರಿತವಾದ ಅಲಗು ಇರುತ್ತದೆ ಎಂದರೆ ಸರಿ. ಸದರಿ ಕತ್ತಿಯ ಮೇಲೆ ಯಾವುದೇ ವಿಶೇಷವಾದ ಗುರುತು ಇರಲಿಲ್ಲ. ಒಂದೇ ರೀತಿಯ ಕಸಿ ಕತ್ತಿಗಳನ್ನು ಒಟ್ಟಾಗಿ ಇಟ್ಟಲ್ಲಿ ಯಾವುದು ಎಂದು ಕತ್ತಿಯನ್ನು ಗುರುತು ಹಿಡಿಯಲು ಆಗುವುದಿಲ್ಲ ಎಂದರೆ ಸರಿಯಲ್ಲ. ಕತ್ತಿಯನ್ನು ಆರೋಪಿ ಬೀಸಾಡಿ ಹೋದಾಗ ನಾನು ಆ ಕತ್ತಿಯನ್ನು ನೋಡಿದ್ದರಿಂದ ಗುರುತು ಹಿಡಿಯಬಲ್ಲೆ. ಪೊಲೀಸರು ಅಂದೇ ಬಂದಿದ್ದು ಅದೇ ದಿನ ಕತ್ತಿಯನ್ನು ತೆಗೆದುಕೊಂಡಿರುತ್ತಾರೆ. ಆ ಸಂದರ್ಭದಲ್ಲಿ ನಾನು ಇರಲಿಲ್ಲ.

14. 2 ದಿನ ಬಿಟ್ಟು ನಾನು ಪೊಲೀಸ್ ಠಾಣೆಗೆ ಹೋಗಿದ್ದೆ.

ನೋಡಿದ್ದನ್ನು ಅಲ್ಲಿ ಹೇಳಿದ್ದೆ. ನಂತರ ಯಾವುದೇ ದಿನ ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ಬೆನ್ನಿಗೆ ಹೊಡೆದಿರುತ್ತಾನೆ ಎಂದು ಹೇಳಿರುತ್ತೇನೆ ಮತ್ತು ಕಪಾಳಕ್ಕೆ ಹೊಡೆದ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ.

15. ಆರೋಪಿ ನನಗೆ ಹಳೆಯ ಪರಿಚಯ ಇರುವುದಿಲ್ಲ. ಚಾಸಾ.1 ಆರೋಪಿಯ ಹೆಸರನ್ನು ಯೋಗೇಶ್ ಎಂದು ಕರೆದಿದ್ದರಿಂದ ಆತನ ಹೆಸರು ಯೋಗೇಶ್ ಎಂದು ಗೊತ್ತಾಯಿತು. ಆರೋಪಿಯ ಮನೆಯಲ್ಲಿ ಆತ ಮತ್ತು ಆತನ ತಾಯಿ ವಾಸ ಮಾಡುತ್ತಿದ್ದಾರೆ.

16. ಆ ದಿನ ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಅಲ್ಲಿ ಯಾವುದೇ ಜಗಳ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದಿನ ನಾನು ಚಾಸಾ.1 ರವರ ಜೊತೆ ಬಂದಿರುತ್ತೇನೆ ಎಂದರೆ ಸರಿ. ಚಾಸಾ.1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಚಾಸಾ.1 ರವರಿಗೆ ಹೊಲೆಯ ಸೂಳೆಮಗ ಎಂದು ಬೈದಿರುವುದಿಲ್ಲ, ಆತನ ಕಪಾಳಕ್ಕೆ ಹೊಡೆದಿರುವುದಿಲ್ಲ ಮತ್ತು ಕತ್ತಿಯಿಂದ ಹೊಡೆಯಲು ಬೀಸಿದ್ದು ಇರುವುದಿಲ್ಲ ಮತ್ತು ಅದು ಬಾಗಿಲಿಗೆ ಬಿದ್ದಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ